ಹೊರಗಿನ ಪ್ರಪಂಚ ರುಚಿಯಾಗುತ್ತಾ ಬಂದಂತೆ 'ಅತ್ತೆ ಒಳ್ಳೇ ಕೆಲಸ ಮಾಡಿದರು. ಇಲ್ಲದಿದ್ದರೆ ಕೂಪಮಂಡೂಕದಂತೆ ಆಗ್ಬಿಡ್ತಿದ್ದೆ' ಎಂದು ಸ್ವತಾ ಛಾಯನಿಗೇ ಅನ್ನಿಸಲು ಶುರುವಾಯ್ತು. ಹೊಸ ಗಾಳಿ, ಹೊಸ ಬೆಳಕು. ಹೊಸ ವಾತಾವರಣ, ಜೊತೆಗೆ ಕಷ್ಟ, ಸುಖ ಹಂಚಿಕೊಳ್ಳಲು ಒಂದಿಬ್ಬರು ಗೆಳತಿಯರು. ಮೊದಮೊದಲಲ್ಲಿ ಕಬ್ಬಿಣದ ಕಡಲೆಯಂತಿದ್ದ ಪಾಠಪ್ರವಚನಗಳು ನಿಧನಿಧಾನವಾಗಿ ಜೀರ್ಣವಾಗತೊಡಗಿದುವು. ಅರ್ಥವಾಗದ್ದನ್ನು ವಿವರಿಸಲು ಗೆಳತಿಯರು. 'ಇಂಗ್ಲಿಷ್ ಮೀಡಿಯಂ ಕಷ್ಟ' ಎನ್ನುತ್ತಾ ಅಲವತ್ತುಕೊಳ್ಳುವ, ಹಳ್ಳಿಯ ಸ್ಕೂಲಲ್ಲಿ ಓದಿದ, ಇವಳಂತಹವರೇ ಹೆಚ್ಚಿದ್ದ ಕಾಲೇಜಿಗೆ ಕ್ರಮೇಣ ಹೊಂದಿಕೊಂಡಳು ಛಾಯಾ. ಇವಳ ಅನುಪಸ್ಥಿತಿಯಲ್ಲಿ ಮಗುವನ್ನು ನೋಡಿಕೊಳ್ಳುತ್ತಿದ್ದ ಸುನಂದಮ್ಮ, ತಡರಾತ್ರಿಯವರೆಗೆ ಇವಳು ಓದುವಾಗಲೂ ಬೆನ್ನಿಗೆ ನಿಂತರು, ಬೈಯುತ್ತಲೇ. "ಯಾವ ಜನ್ಮದಲ್ಲಿ ಏನು ಪಾಪ ಮಾಡಿ ಹುಟ್ಟಿದೀನೋ, ಈ ಜನ್ಮದಲ್ಲಿ ಕಾಡಿಸ್ತಿದೆ. ಬೆನ್ನುಕೋಲು ಮುರ್ಕೊಂಡು ಕೆಲಸ ಮಾಡೋದೇ ಆಯ್ತು..." ಅತ್ತೆ ಉರು ಹಾಕುವಾಗ ಛಾಯಾ ಮುಖ ಮುರಿಯುತ್ತಿದ್ದಳು. ಈ ಜನ್ಮದಲ್ಲೂ ಮಾಡುತ್ತಿಲ್ಲವೇ ಪಾಪ? ತನ್ನ ಮುಖ ಕಂಡರೆ ನಾಲಿಗೆ ಝಳಪಿಸುವ ಅತ್ತೆಗೆ ಹೀಗೆ ಕಂಡವರ ಮನೆಯ ಹುಡುಗಿಯನ್ನು ತಂದು ಕಾಡಿಸುವುದು ಪಾಪ ಅನಿಸುವುದಿಲ್ಲವೇ? ಅತ್ತೆ ಮಾತೆತ್ತಿದರೆ ಅದರಲ್ಲೊಂದು ಯಜಮಾನಿಕೆ. ಅದರಲ್ಲೊಂದು ಅಸಹನೆ. 'ಏನಾದರಾಗಲಿ, ಕೊನೇಪಕ್ಷ ಅತ್ತೆಯ ಬಾಯಿಂದ ತಪ್ಪಿಸಿಕೊಳ್ಳುವುದಕ್ಕೋಸ್ಕರವಾದರೂ ಓದು ಒಂದು ಹೆಳೆ ಆಯ್ತು' ಅನ್ನುವಷ್ಟು ಛಾಯಾ ತನ್ನ ಮನಸ್ಸನ್ನು ಸಮಾಧಾನಿಸಿಕೊಂಡಿದ್ದಳು.

***

ಎರಡು ವರ್ಷಗಳ ಪಿ.ಯು.ಸಿ. ದಾಟಿ, ಡಿ.ಎಡ್. ಮುಗಿಸಿಕೊಂಡು ಛಾಯಾ, ತನ್ನ ಗೆಳತಿಯರಂತೆ. ಮುಂದೆ? 'ಕೆಲಸ ಹುಡುಕ್ಕೋ... ಕೆಲಸ ಹುಡುಕ್ಕೋ... ಕೂತು ತಿನ್ನೋಕೆ ಇಲ್ಲೇನು ಗಂಟು ಹುಗಿದಿಟ್ಟಿಲ್ಲ' ತಲೆ ತಿನ್ನುತ್ತಿದ್ದರು ಸುನಂದಮ್ಮ. ಕೊನೆಗೂ ಅದೃಷ್ಟ ಕೂಡಿ ಬಂತು. ಊರಿಗೆ ಸಮೀಪದ ಪ್ರಾಥಮಿಕಶಾಲೆಯಲ್ಲಿ ಅವಳಿಗೆ ಉದ್ಯೋಗ ದೊರಕಿ ಆಕಾಶದ ನಕ್ಷತ್ರಗಳು ಬೊಗಸೆಯಲ್ಲಿ ಬಂದು ಬಿದ್ದಂತೆ ಸಂಭ್ರಮ. ತನಗೆ ಅಷ್ಟು ಖುಷಿಯಾಗುತ್ತಿರುವುದಕ್ಕೆ ಅವಳಿಗೇ ಅಚ್ಚರಿ. ಕೈ ಹಿಡಿದವನನ್ನು ಶಾಶ್ವತವಾಗಿ ಕಳೆದುಕೊಂಡು ಅತ್ತೆಯ ವರಾತಕ್ಕೆ ಮನೆಯ ಮೆಟ್ಟಲಿಳಿದ ತಾನು ಒಂದು ಕೆಲಸ ಸಿಕ್ಕಿದ್ದು ಕಾರಣವಾಗಿ ಇಷ್ಟೆಲ್ಲಾ ಸಂಭ್ರಮಿಸಲು ಸಾಧ್ಯವೇ? ಗಂಡನನ್ನು ಮರೆತುಬಿಟ್ಟೆನೇ ತಾನು? ಅವನಿಲ್ಲದೆಯೂ ಬದುಕು ಮಾಡಬಲ್ಲೆನೆಂಬ ಧೈರ್ಯ ಕೊಟ್ಟ ಆತ್ಮತೃಪ್ತಿಯೇ ಇದು? ಅಥವಾ ಸಂತೋಷ




ಅನ್ನುವುದನ್ನು ನಮಗೆ ನಾವೇ ಕಂಡುಕೊಳ್ಳಬಹುದು, ಅದಕ್ಕಾಗಿ ಅನ್ಯರ ಮೇಲೆ ಅವಲಂಬಿತರಾಗಬೇಕಾಗಿಲ್ಲ ಎನ್ನುವುದು ಬದುಕು ಕಲಿಸಿದ ಪಾಠವೇ?

ಮಗ ಅಶೋಕ ಈಗ ದೊಡ್ಡವನಾಗಿದ್ದ. ಅಜ್ಜಿಯ ಮೇಲಿನ ಅವಲಂಬನೆ ಕಮ್ಮಿಯಾಗಿತ್ತು. ಅನ್ನ ಕಲೆಸಿಕೊಟ್ಟರೆ ಅವನೇ ಉಣ್ಣುತ್ತಾನೆ. ಬಿಸಿಲು, ಮಳೆಗಳ ಪರಿವೆಯಿಲ್ಲದೆ ಅಂಗಳದಲ್ಲಿ ಮಣ್ಣಾಟ ಆಡಿಕೊಂಡಿರುತ್ತಾನೆ. ತನ್ನ ಮೊದಲ ಸಂಬಳದಲ್ಲಿ